# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ

## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-07

Cw-21

| | |
|---|---|
| ಸಾಕ್ಷಿದಾರರ ಹೆಸರುಃ | ಖಲಂದರ |
| ತಂದೆಃಗಂಡನ ಹೆಸರುಃ | ಸುಲೇಮಾನ್ |
| ವಯಸ್ಸುಃ | 26 ವರ್ಷ |
| ಉದ್ಯೋಗಃ | ಹಮಾಲಿ |
| ವಾಸ ಸ್ಥಳಃ | ಯತ್ತಿನಹಳ್ಳಿ |

**ದಿನಾಂಕ:05.09.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರು, ಮೃತ ನಿಂಗಪ್ಪ ಗೊತ್ತಿಲ್ಲ. ನಿಂಗಪ್ಪ ಯಾವ ರೀತಿ ತೀರಿಕೊಂಡ ಗೊತ್ತಿಲ್ಲ. ಯಾರು ಕೊಲೆ ಮಾಡಿದ್ದಾರೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

ದಿನಾಂಕಃ16.03.2021 ರಂದು ಮದ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಗುತ್ತಲ ಕ್ರಾಸ್ ನಲ್ಲಿದ್ದಾಗ ಚಾಸಾ-1 ಫೋನ್ ಮಾಡಿ ಎಲ್ಲಿಗೆ ಹೊರಟಿದ್ದೀಯಾ ಅಂತಾ ನಾನು ಕೇಳಿದೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಮೃತ ನಿಂಗಪ್ಪನ ಜಗಳದ ಬಗ್ಗೆ ಚಾಸಾ-1 ವಿಗೆ ತಿಳಿಸಿದೆ ಎಂದರೆ ಸರಿಯಲ್ಲ. ಆರೋಪಿಗಳು ನಿಂಗಪ್ಪನ ತಲೆಗೆ ಕಬ್ಬಿಣದ ಪೋರ್ಕ ಮತ್ತು ವೀಲ್

ಪಾನ್ ನಿಂದ ಹೊಡೆದು ಕೊಲೆ ಮಾಡಿರುವುದು ಕೇಳಿ ಗೊತ್ತಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ.

ನನ್ನ---------------------------- ಗೊತ್ತಾಗಿರುತ್ತದೆ ಎನ್ನುವ ಸಾಕ್ಷಿಯ ತನ್ನ ಹೇಳಿಕೆ ಭಾಗವನ್ನು ಓದಿ ಹೇಳಿದಾಗ ಸಾಕ್ಷಿಯು ತಾನು ಈ ರೀತಿ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆ ಭಾಗವನ್ನು ನಿಪಿ-20 ಅಂತಾ ಗುರ್ತಿಸಲಾಯ್ತು. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯಮಾಡಲು ಸುಳ್ಳು ಹೇಳುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.